ಕರ್ನಾಟಕ ಸರಕಾರ

## ತಹಶೀಲ್ದಾರರ ನ್ಯಾಯಾಲಯ ಹೂವಿನ ಹಡಗಲಿ

ಉಪಸ್ಥಿತರು:- ವೆಂಕನಗೌಡ ಆರ್ ಪಾಟೀಲ್, ತಹಶೀಲ್ದಾರರು ಹೂವಿನ ಹಡಗಲಿ

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| ಬಾಲಪ್ಪನವರ ರತ್ನಮ್ಮ ಗಂಡ ಹೇಮಗಿರಿಯಪ್ಪ, ನಾಗತಿಬಪಾಪುರ | 1)ಬಿ.ಹನುಮಂತಪ್ಪ ತಂದೆ ಲೇಟ್ ಬಿ ಚನ್ನಬಸಪ್ಪ<br>2)ಬಿ ಅಂಜಿನಪ್ಪ ತಂದೆ ಲೇಟ್ ಬಿ ಚನ್ನಬಸಪ್ಪ<br>ಶಿವಲಿಂಗನಹಳ್ಳಿ |

### ದಾವಾ ಜಮೀನಿನ ವಿವರ

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ಶಿವಲಿಂಗನಹಳ್ಳಿ | 347 ಬಿ | 2.25 |

ಪಿಠೀಕೆ

ಮೇಲಿನ ದಾವಾ ಜಮೀನನ್ನು ವಾದಿಯಾದ ಬಾಲಪ್ಪನವರ ರತ್ನಮ್ಮ ಗಂಡ ಹೇಮಗಿರಿಯಪ್ಪ, ನಾಗತಿಬಪಾಪುರ ಇವರು ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಪಟ್ಟಾದಾರರಾದ ಬಾಲಪ್ಪರ ಹೇಮಗಿರಿಯಪ್ಪ ತಂದೆ ಚನ್ನಬಸಪ್ಪ ನಾಗ್ತಿಬಸಾಪುರ ಇವರು ದಿನಾಂಕ 17/08/2012 ರಂದು ಮರಣ ಹೊಂದಿದ್ದು ಅವರ ವಾರಸುದಾರರ ಹಾಗೂ ವಾದಿಗಳು ತಮ್ಮ ಹೆಸರಿಗೆ ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 128 ರನ್ವಯ ಅರ್ಜಿದಾರರ ಕೋರಿಕೆ ಮೇರೆಗೆ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ ಗ್ರಾಮದಲ್ಲಿ ಗ್ರಾಮಲೆಕ್ಕಾಧಿಕಾರಗಳು ನಿಗಧಿತ ಅವಧಿಯೊಳಗೆ ನಮೂನೆ-21ನ್ನು ಜಾರಿಮಾಡಿರುತ್ತಾರೆ. ನಿಗಧಿತ ಅವದಿಯೊಳಗೆ ಅಂದರೆ ದಿನಾಂಕ 12/06/2015 ರಂದು ಪ್ರತಿವಾದಿಯಾದ ಶ್ರೀ 1)ಬಿ.ಹನುಮಂತಪ್ಪ ತಂದೆ ಲೇಟ್ ಬಿ ಚನ್ನಬಸಪ್ಪ 2)ಬಿ ಅಂಜಿನಪ್ಪ ತಂದೆ ಲೇಟ್ ಬಿ ಚನ್ನಬಸಪ್ಪ ಶಿವಲಿಂಗನಹಳ್ಳಿ ಇವರು ದಾವಾದ ಜಮೀನಿನಲ್ಲಿ ತಮ್ಮ ಹಕ್ಕು ಇರುವುದಾಗಿ ತಿಳಿಸಿ ಹಕ್ಕು ಬದಲಾವಣೆ ಪ್ರಕರಣ ಸಂಖ್ಯೆ 69/2014-2015 ಕ್ಕೆ ತಕರಾರು ಅರ್ಜಿ ಸಲ್ಲಿಸಿರುತ್ತಾರೆ.

ಮೇಲಿನ ದಾವಾ ಜಮೀನಿನ ಹಕ್ಕು ಬದಲಾವಣೆಗೆ ತಮ್ಮ ಆಕ್ಷೇಪಣೆ ಇರುವುದಾಗಿ ಪ್ರತಿವಾದಿಗಳು ಆಕ್ಷೇಪಣಾ ಅರ್ಜಿ ಸಲ್ಲಿಸಿದ ಕಾರಣ ಈ ಪ್ರಕರಣವನ್ನು ವಿವಾದದಾಸ್ಪದವೆಂದು ಕಂದಾಯ ಪರಿವೀಕ್ಷಕರು ಹಡಗಲಿ ಇವರು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿ ಪ್ರಕರಣವನ್ನು ವಿವಾದಿತವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಾಲಂ 129ರ ಪ್ರಕಾರ ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ ವಿಚಾರಣೆಯನ್ನು ದಿನಾಂಕ 12/05/2016 ರಂದು ಪ್ರಾರಂಭಿಸಿ ದಿನಾಂಕ:-20-10-2016ರ ವರೆಗೆ ವಿಚಾರಣೆ ನಡೆಸಲಾಯಿತು.

ವಿಚಾರಣೆ ವೇಳೆ ವಾದಿ-ಪ್ರತಿವಾದಿಗಳು ಹಾಜರಿದ್ದು ಹೇಳಿಕೆ ನೀಡಿರುತ್ತಾರೆ. ಅಂತೆಯೇ ದಿನಾಂಕ 23/06/2016 ರಂದು ನಡೆದ ವಿಚಾರಣೆ ವೇಳೆ ವಾದಿ-ಪ್ರತಿವಾದಿಗಳು ಗೈರುಹಾಜರಿದ್ದು, ದಿನಾಂಕ 15/10/2016ರಂದು

ನಡೆದ ವಿಚಾರಣೆ ವೇಳೆ ಸದರಿ ಜಮೀನು ತಮ್ಮ ಗಂಡನ ಜೀವಿತಾವದಿಯಲ್ಲಿ ಸಂಪಾದಿಸಿದ ಆಸ್ತಿಯಾಗಿದ್ದು ತಮ್ಮ ಹೆಸರಿಗೆ ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಲು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ವಾದಿ-ಪ್ರತಿವಾದಿಗಳ ವಾದವನ್ನು ಆಲಿಸಲಾಗಿ ಪಟ್ಟಾದಾರರ ವಾರಸುದಾರರಿಗೆ ಪೋತಿವಾರಸ ಪ್ರಕಾರ ಪಟ್ಟಾದಾರರ ವಾರಸುದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡುವುದು, ಸಮಂಜಸವಾಗಿದ್ದು ಸದರಿ ಜಮೀನು ತಮ್ಮ ಗಂಡನ ಜೀವಿತಾವದಿಯಲ್ಲಿ ಸಂಪಾದಿಸಿದ ಆಸ್ತಿಯಾಗಿದ್ದು ನೊಂದಾಯಿತ ಕ್ರಯ ಪತ್ರ ಡಾ ನಂಬರ್ 42/2005-06 ಪ್ರಕಾರ ಖರೀದಿ ಪಡೆದಿದ್ದು ಪೋತಿ ವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೆಳಕಂಡ ಆದೇಶ

**ಸಂ/ಕಂ/ಪಹಣಿ /ವಿವಾದ/06/2015-16** **ದಿನಾಂಕ:-20/10/2016**

**ಆದೇಶ**

ಪಿಠೀಕೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ತಕರಾರುದಾರರ ಅರ್ಜಿಯನ್ನು ವಜಾಗೊಳಿಸಿ, ಪೋತಿ ವಾರಸ ಪ್ರಕಾರ ಬಾಲಪ್ಪನವರ ರತ್ನಮ್ಮ ಗಂಡ ಹೇಮಗಿರಿಯಪ್ಪ ಇವರ ಹಸರಿಗೆ ಶಿವಲಿಂಗನಹಳ್ಳಿ ಗ್ರಾಮದ ಸರ್ವೆ ನಂಬರ್ 347 B (ವಿ) 2.25 ಎಕರೆ ಜಮೀನನ್ನು ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:- 03/11/2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ತಹಶೀಲ್ದಾರರು
ಹೂವಿನಹಡಗಲಿ

ಪ್ರತಿಯನ್ನು:-

1)ವಾದಿ/ಪ್ರತಿವಾದಿಗಳಿಗೆ ಹಾಗೂ ಅವರ ಪರ ವಕೀಲರಿಗೆ

2)ಗಣಕೀರಣ ಕೇಂದ್ರ ಶಾಖೆ ಶಿರಸ್ತೇದಾರರು ತಾಲೂಕ ಕಛೇರಿ ಹಡಗಲಿ ಇವರಿಗೆ

3)ಕಂದಾಯ ನೀರಿಕ್ಷಕರು ಹಡಗಲಿ ಇವರಿಗೆ

4)ಹೆಚ್ಚಿನ ಪ್ರತಿ ಕಛೇರಿ ಕಡತಕ್ಕೆ